**ಓ.ಎಸ್. ನಂಃ 94/2023**

**ಡಿ.ಡಬ್ಲ್ಯೂಃ 1**

**ದಿನಾಂಕ 16.01.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪ್ರತಿವಾದಿಯ ಪರ: ಶ್ರೀ ಟಿ.ಜಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಅಸಲು ದಾವೆ ಸಂಖ್ಯೆ 303/2020 ರ ಆದೇಶ ಪತ್ರದ, ವಾದಪತ್ರದ, ಪ್ರತಿವಾದಪತ್ರದ, ಮೆಮೊದ, ಮಧ್ಯಂತರ ಅರ್ಜಿ ಸಂಖ್ಯೆ 1ರ ಮೇಲೆ ಹೊರಡಿಸಿದ ಆದೇಶದ ದೃಡಿಕೃತ ನಕಲುಗಳನ್ನು ನಿಡಿ.1 ರಿಂದ 5 ಎಂದು, ಎಮ್.ಎ 3/2021 ರ ಆದೇಶದ ದೃಡಿಕೃತ ನಕಲನ್ನು ನಿಡಿ.6 ಎಂದು, ದಿಃ 20.03.1991 ರ ನೊಂದಾಯಿತ ಖರೀದಿ ಪತ್ರದ ದೃಡಿಕೃತ ನಕಲನ್ನು ನಿಡಿ.7 ಎಂದು, ದಿಃ 20.05.2013 ರ ನೊಂದಾಯಿತ ದಾನಪತ್ರದ ಗಣಕೀಕೃತ ದೃಡಿಕೃತ ನಕಲನ್ನು ನಿಡಿ.8 ಎಂದು, ಅದಕ್ಕೆ ಲಗತ್ತಾದ ಪ್ರಮಾಣ ಪತ್ರವನ್ನು ನಿಡಿ.8(ಎ) ಎಂದು, ಭೂ ಹಿಡುವಳಿ ಪ್ರಮಾಣ ಪತ್ರವನ್ನು ನಿಡಿ.9 ಎಂದು, ವರ್ಗಾವಣೆ ಆದೇಶದ ದೃಡಿಕೃತ ಮತ್ತು ಗಣಕೀಕೃತ ನಕಲನ್ನು ನಿಡಿ.10 ಮತ್ತು 11 ಎಂದು, ಪಹಣಿಗಳನ್ನು ನಿಡಿ.12 ರಿಂದ 17 ಎಂದು, ತೆರಿಗೆ ಪಾವತಿ ರಸೀದಿಯನ್ನು ನಿಡಿ.18 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಾಲಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**